ಸಾಕ್ಷಿಯನ್ನು ದಿಃ 23.02.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

<u>ಪಾಟೀ ಸವಾಲು ಃ *2* ಮತ್ತು *5* ನೇ ಆರೋಪಿತರ ಪರ ವಕೀಲರಿಂದ ಃ</u>

1. 1 ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ. 1 ನೇ ಆರೋಪಿಯು ನನ್ನಿಂದ 7 ಲಕ್ಷ ರೂಗಳನ್ನು ಸಾಲವಾಗಿ ಪಡೆದಿದ್ದರು ಎನ್ನುವ ಬಗ್ಗೆ ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಆರೋಪಿ ನನಗೆ ಯಾವುದೇ ಚೆಕ್ ನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಶ್ರೀನಿವಾಸ ರವರ ಫೋನ್ ನಂಬರ್ ನ್ನು ನಾನು ಹೇಳಲು ಆಗುವುದಿಲ್ಲ. ಶ್ರೀನಿವಾಸ ರವರ ಫೋನ್ ನಂಬರ್ ನ್ನು ಪೊಲೀಸರಿಗೆ ಕೊಡಲು ತೊಂದರೆ ಇರಲಿಲ್ಲ. 2 ನೇ ಆರೋಪಿಯು ನನಗೆ ಯಾವುದೇ ರೀತಿ ಫೋನ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಂತರ ನಾನು 2 ನೇ ಆರೋಪಿಯನ್ನು ಬೇಟಿ ಮಾಡಿ ಸೈಟ್ ಹತ್ತಿರ ಹೋಗಿರುತ್ತೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೊಂಡಾ ಆಕ್ಟಿವಾ ಸ್ಕೂಟರ್ ನಂಬರ್ 6052 ಕರ್ನಾಟಕ ರಿಜಿಸ್ಟ್ರೇಷನ್ ಇರುತ್ತದೆ. ಈ ಸ್ಕೂಟರ್ ನ್ನು ಪೊಲೀಸರು ಸೀಜ್ ಮಾಡಿರುವುದಿಲ್ಲ. ಮತ್ತೆ ಆ ಜಾಗಕ್ಕೆ 4 ಜನ ಆರೋಪಿತರು ಬಂದಿರುತ್ತಾರೆ ಎಂಬುದಾಗಿ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಬಾಸ್ ನ್ನು ಕರೆದುಕೊಂಡು ಬರುತ್ತೇನೆ ಎಂಬುದಾಗಿ ಆ ನಾಲ್ಕು ಜನರಲ್ಲಿ 4 ನೇ ಆರೋಪಿ ಸ್ಕೂಟರ್ ನ್ನು ತೆಗೆದುಕೊಂಡು ಹೋದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ಫೋನ್ ನ್ನು ತೆಗೆದುಕೊಂಡು ಅದನ್ನು ಮುರಿದು ಹಾಕಿರುತ್ತಾರೆ ಎಂಬುದಾಗಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸಿಮ್ ಕಾರ್ಡನ್ನು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಈಗಲೂ ಆ ಸಿಮ್ ಕಾರ್ಡ್ ನನ್ನ ಬಳಿ ಇರುತ್ತದೆ.

2. ಎಲ್ಲರೂ ಸೇರಿಕೊಂಡು 25 ಲಕ್ಷ ಹಣ ಕೊಡು ಇಲ್ಲದಿದ್ದರೆ ನಿನ್ನನ್ನು ಮುಗಿಸಿಬಿಡುತ್ತೇನೆ ಅಂತ ಹೇಳಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರನ್ನು ನಾನು ನ್ಯಾಯಾಲಯದಲ್ಲಿ ಮಾತ್ರ ನೋಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಅವರು ಖಾಲಿ ಬಾಂಡ್ ಪೇಪರ್ ಮೇಲೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಒಂದೂವರೆ ಲಕ್ಷ ಹಣ ಮನೆಯಲ್ಲಿ ಇದೆ ಬೇಕಾದರೆ ಕೊಡುತ್ತೇನೆ ಎಂದು ನಾನು ಅವರಿಗೆ ಹೇಳಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನನ್ನು ಸ್ಕೂಟರ್ ನಲ್ಲಿ ನನ್ನ ವಾಸದ ಮನೆಗೆ ಕರೆದುಕೊಂಡು ಬರುವ ಸಂದರ್ಭದಲ್ಲಿ ನಾನು ಕಿರುಚಿಕೊಂಡಿರುವುದಿಲ್ಲ. ಆ ರೀತಿ ಕಿರುಚಿಕೊಳ್ಳಲು ತೊಂದರೆ ಇರಲಿಲ್ಲ. ಕಾರಣ ಅವನು ಒಳ್ಳೆಯವನು ಎಂದು ನಂಬಿದ್ದೆನು.

3. ಆಗ ನಾನು 2 ನೇ ಆರೋಪಿಗೆ ಒಂದೂವರೆ ಲಕ್ಷ ಕೊಟ್ಟೆನು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮನೆಯಲ್ಲಿ ನನ್ನ ಹೆಂಡತಿ , ನನ್ನ ಸಹೋದರ ಮತ್ತು ನನ್ನ ತಂಗಿ ಇದ್ದರು. 2 ನೇ ಆರೋಪಿಯು ಒಳ್ಳೆಯವನು ಎಂಬುದಾಗಿ ತಿಳಿದು ಒಂದೂವರೆ ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ಹಾಗಾಗಿ ಅವನನ್ನು ಕೂಡಿ ಹಾಕಲು ಸಂದರ್ಭ ಬಂದಿರುವುದಿಲ್ಲ.

4. 2 ನೇ ಆರೋಪಿಯು ನನಗೆ ಕೊಲೆ ಮಾಡುತ್ತೇನೆ ಎಂಬುದಾಗಿ ಹೇಳಿರುವುದಿಲ್ಲ. ಆದರೆ ಉಳಿದ ಆರೋಪಿತರು ನನಗೆ ಆ ರೀತಿ ಭಯವನ್ನು ಹಾಕಿರುತ್ತಾರೆ. ಆ ದಿನ ನಾನು ಮನೆಯಿಂದ ಆಚೆ ಹೋಗಲು ಭಯವಾದ್ದರಿಂದ ದೂರನ್ನು ಕೊಡಲು ಆಗಿರುವುದಿಲ್ಲ.

5. ನಮ್ಮ ಮನೆಯಲ್ಲಿ ಲ್ಯಾಂಡ್ ಲೈನ್ ಫೋನ್ ಇರುತ್ತದೆ. ಪೊಲೀಸರ ನಂಬರ್ ಇಲ್ಲದಿದ್ದರಿಂದ ಹಾಗೂ ಆರೋಪಿತರು ನನಗೆ ಯಾರಿಗೂ ಹೇಳದಂತೆ ಭಯ ಪಡಿಸಿದ್ದರಿಂದ ನಾನು ಫೋನ್ ಮಾಡಿರುವುದಿಲ್ಲ.

6. ದಿಃ 15.06.2015 ರಂದು ಪೊಲೀಸರು ನನ್ನನ್ನು ಬರಲು ಹೇಳಿದರು, ಆನಂತರ ನಾನು ಪೊಲೀಸ್ ಠಾಣೆಗೆ ಹೋದೆ, ನಂತರ ಪೊಲೀಸರನ್ನು ಆಲಹನಳ್ಳಿ ಸೈಟಿಗೆ ಕರೆದುಕೊಂಡು ಹೋದೆ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ನಾನು ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹತ್ತಿರ ಇದ್ದಂತಹ ದಾಖಲೆಗಳನ್ನು ನಾನು ಪೊಲೀಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಗೆ ಬಂದು ಮಹಜರ್ ಮಾಡಿರುತ್ತಾರೆ ಎಂಬುದಾಗಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

7. ನಂತರ ಪೊಲೀಸರಿಗೆ ನಾನು ಆರೋಪಿತರು ನನ್ನನ್ನು ಕರೆದುಕೊಂಡು ಹೋಗಿದ್ದ ಜಾಗಕ್ಕೆ ಕರೆದುಕೊಂಡು ಹೋಗಿರುತ್ತೇನೆ ಮತ್ತು ಪೊಲೀಸರು ಆ ಸ್ಥಳದಲ್ಲಿ ಪರಿಶೀಲಿಸಿ ಮಹಜರ್ ಮಾಡಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

8. ದೂರು ದಾಖಲಾದ 2-3 ತಿಂಗಳ ನಂತರ ಪೊಲೀಸರು 61 ಸಾವಿರವನ್ನು 1, 2 ಮತ್ತು 4 ನೇ ಆರೋಪಿಗಳಿಂದ ವಶಪಡಿಸಿಕೊಂಡಿರುತ್ತೇವೆ ಎಂಬುದಾಗಿ ನನಗೆ ತಿಳಿಸಿದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ದುಡ್ಡಿನಲ್ಲಿ 500 ಹಾಗೂ 100 ರೂಗಳ ನೋಟುಗಳು ಇದ್ದವು ಎಂಬುದಾಗಿ ನಾನು ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

9. ಮಚ್ಚಿಗೆ ಹಿಡಿ ಇದ್ದುದ್ದರಿಂದ ನಾನು ಗುರುತಿಸಿರುತ್ತೇನೆ. ಮತ್ತೊಂದು ಪ್ಲೇನ್ ಆಗಿತ್ತು. ಆ ಮಚ್ಚುಗಳನ್ನು ಆರೋಪಿತರು ಕೃತ್ಯಕ್ಕೆ ಉಪಯೋಗಿಸಿರದಿದ್ದರೂ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಸೇಲ್ ಡೀಡ್ ಜೆರಾಕ್ಸ ನ್ನು ಕೇಸಿಗೋಸ್ಕರ ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಟ್ಟಾ ಮತ್ತು ರಶೀದಿ ಪುಸ್ತಕಗಳನ್ನು ನಾನಾಗೇ ಪೊಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಟಿ.ನರಸೀಪುರ ಸೇತುವೆ ಬಳಿ ಪೊಲೀಸರು

ಮಹಜರ್ ಮಾಡಿರುತ್ತಾರೆ ಎಂಬುದಾಗಿ ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ , ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ವಿನಾಕಾರಣ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

10. ಅರಸಯ್ಯ ನನಗೆ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ಅವರ ಬಳಿ ನಾನು ಸೈಟುಗಳನ್ನು ಮಾರುವ ವ್ಯವಹಾರ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಅದರಲ್ಲಿ ಒಂದು ಸೈಟಿನ ದುಡ್ಡನ್ನು ಕೊಡದಿದ್ದಾಗ ಈ ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ವಿಚಾರದಲ್ಲಿ 1 ನೇ ಆರೋಪಿಯ ಮತ್ತು ಅರಸಯ್ಯ ಸಿಕ್ಕಿಲ್ಲದಿದ್ದುದ್ದರಿಂದ 2 ಮತ್ತು 5 ನೇ ಆರೋಪಿತರ ವಿರುದ್ಧ ನಾನು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಃ ಇಲ್ಲ</u>**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು